KAHS610038692018

**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನರಾಯಪಟ್ಟಣ**

**ಉಪಸ್ಥಿತರು : ಶ್ರೀಮತಿ ಕುಸುಮ.ವಿ.,** ಬಿ.ಎ.ಎಲ್., ಎಲ್ ಎಲ್.ಬಿ.
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.

**ಅಸಲು  ದಾವಾ ಸಂಖ್ಯೆ 653/2018**

**ದಿನಾಂಕ : 30 ನೇ ಏಪ್ರಿಲ್  2026**

**ವಾದಿ** : ಶ್ರೀಮತಿ. ಭಾಗ್ಯಮ್ಮ,
ಕೋಂ ನಿಂಗೇಗೌಡ ಉಃ ಚಂದ್ರೇಗೌಡ,
ಸುಮಾರು 57 ವರ್ಷ ವಯಸ್ಸು,
ವಾಸಃ ಕಿರೀಸಾವೆ ಗ್ರಾಮ,
ಹಿರೀಸಾವೆ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.

**(ಪ್ರತಿನಿಧಿಸುವವರು : ಶ್ರೀ. ಎಂ.ಎಂ.ಎಸ್ ವಕೀಲರು)**

**ವಿರುದ್ಧ**

**ಪ್ರತಿವಾದಿಯರು** : 1. ಬಿ.ಹೆಚ್ ಕೃಷ್ಣೇಗೌಡ,
ಬಿನ್ ಲೇಟ್ ಹೊನ್ನೇಗೌಡ,

ಸುಮಾರು 62 ವರ್ಷ ವಯಸ್ಸು,

2. ಹರೀಶ್,

ಬಿ.ಹೆಚ್ ಕೃಷ್ಣೇಗೌಡ,

ಸುಮಾರು 38 ವರ್ಷ ವಯಸ್ಸು,

ಇಬ್ಬರ ವಾಸಃ ಬ್ಯಾಡರಹಳ್ಳಿ ಗ್ರಾಮ,

ಕಿರೀಸಾವೆ ಪೋಸ್ಟ್,

ಹಿರೀಸಾವೆ ಹೋಬಳಿ,

ಚನ್ನರಾಯಪಟ್ಟಣ ತಾಲ್ಲೂಕು,

ಹಾಸನ ಜಿಲ್ಲೆ.

**( ಪ್ರತಿನಿಧಿಸುವವರು : ಶ್ರೀ. ವೈ.ಕೆ.ಪಿ ವಕೀಲರು)**

| | | |
|---|---|---|
| 1. ದಾವಾ ಹೂಡಿದ ದಿನಾಂಕ | ಃ | 16.11.2018 |
| 2. ದಾವಾ ಸ್ವರೂಪ | ಃ | ಘೋಷಣೆ,<br>ಮತ್ತು ಶಾಶ್ವತ ನಿರ್ಭಂಧಕಾಜ್ಞೆ |
| 3. ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | ಃ | 10.02.2022 |
| 4. ತೀರ್ಪನ್ನು ಪ್ರಕಟಿಸಿದ ದಿನಾಂಕ | ಃ | 30.04.2016 |
| 5. ಒಟ್ಟು ಅವಧಿ | ಃ | ವರ್ಷ ತಿಂಗಳು ದಿನ<br>7 05 14 |

**(ಶ್ರೀಮತಿ ಕುಸುಮ.ವಿ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.**

**ಃಃ ತೀರ್ಪು ಃಃ**

ವಾದಿಯು ದಾವಾ ಷಡ್ಯೂಲ್ ಸ್ವತ್ತಿನ ಹಕ್ಕುದಾರಳೆಂದು ಘೋಷಿಸಬೇಕೆಂಬ ಹಕ್ಕು ಘೋಷಣೆ ಪರಿಹಾರಕ್ಕಾಗಿ ಹಾಗೂ ಶಾಶ್ವತ ನಿರ್ಭಂಧಕಾಜ್ಞೆ ಪರಿಹಾರಕ್ಕಾಗಿ ಹಾಗೂ ಇತರೆ ಪರಿಹಾರಗಳನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ.

**2. ವಾದಪತ್ರದ ಸಂಕ್ಷೀಪ್ತ ವಿವರಣೆ :**

ವಾದಿ ಮತ್ತು ಪ್ರತಿವಾದಿಯವರು ಒಂದೇ ಗ್ರಾಮದವರಾಗಿರುತ್ತಾರೆ. ಸದರಿ ದಾವಾ ಷೆಡ್ಯೂಲ್ ಸ್ವತ್ತು ಮೂಲತಃ ವಾದಿಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡರವರಿಗೆ 1994 ನೇ ಸಾಲಿನಲ್ಲಿ ಇದೇ ಬ್ಯಾಡರಹಳ್ಳಿ ಗ್ರಾಮದ ಸರ್ವೆ ನಂಬರ್ 50/ಬ್ಲಾಕ್1 ರಲ್ಲಿ 25.00 ಗುಂಟೆ ಜಮೀನು ಮತ್ತು ಇದೇ ಸರ್ವೆ ನಂಬರ್ 50/ಬ್ಲಾಕ್ 2 ರಲ್ಲಿ 15 ಗುಂಟೆ ಜಮೀನು ಮತ್ತು ಸರ್ವೆ ನಂಬರ್ 48/3 ರಲ್ಲಿ 12 ಗುಂಟೆ ಜಮೀನು ಸರ್ಕಾರದಿಂದ ಮಂಜೂರಾಗಿದ್ದು, ಅದರಲ್ಲಿ 5 ಗುಂಟೆ ಖರಾಬು ಕಳೆದು ವಾದಿಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡ ಬಿನ್ ನಂಜುಂಡೇಗೌಡರವರ ಹೆಸರಿಗೆ ಎಂ ಆರ್ ನಂಬರ್ 19/1998 99 ರಂದು ಖಾತೆ ವಗೈರೆ ಕೂಡ ಆಗಿರುತ್ತದೆ. ಆ ಲಾಗಾಯ್ತಿನಿಂದ ಸದರಿ ಸ್ವತ್ತಿನಲ್ಲಿ ವಾದಿಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡ ಮತ್ತು ವಾದಿಯ ಕುಟುಂಬದವರು ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನಾನುಭವ ಮಾಡಿಕೊಂಡು ಅನುಭವಿಸಿಕೊಂಡು ಹಕ್ಕುದಾರರಾಗಿದ್ದುಕೊಂಡು ಸದರಿ ದಾವಾ ಷೆಡ್ಯೂಲ್ ಸ್ವತ್ತನ್ನು ಸಾಕಷ್ಟು ಹಣ ಖರ್ಚು ಮಾಡಿ ಅಬಾದು ಮಾಡಿಕೊಂಡು ಫಲವತ್ತಾದ ಭೂಮಿಯನ್ನಾಗಿ ಮಾಡಿಕೊಂಡು ಬಂದಿರುತ್ತಾರೆ.

**3.** ವಿಧ್ಯಾಮಾನಗಳು ಹೀಗಿರುವಾಗ ವಾದಿಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡ ಬಿನ್ ನಂಜುಂಡೇಗೌಡರವರು ದಿನಾಂಕ: 08.04.2017 ರಂದು ಮರಣ ಹೊಂದಿದ್ದು, ಅವರ ಮರಣ ನಂತರ ಸದರಿ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ವಾದಿ ಮತ್ತು ವಾದಿಯ ಕುಟುಂಬದವರು ಸ್ವಾಧೀನದಲ್ಲಿದ್ದುಕೊಂಡು ಅನುಭವಿಸಿಕೊಂಡು ಬರುತ್ತಿರುತ್ತಾರೆ. ವಾದಿಯು ಸದರಿ ದಾವಾ ಷೆಡ್ಯೂಲ್ ಸ್ವತ್ತನ್ನು ತನ್ನ ಗಂಡ ನಿಂಗೇಗೌಡ ಉಃ ಚಂದ್ರೇಗೌಡರವರ ಮರಣದ ನಂತರ ತನ್ನ ಹೆಸರಿಗೆ

ಎಂ.ಆರ್.ಹೆಚ್ 7/2017-18 ರಂತೆ ಪೌತಿ ಖಾತೆಯನ್ನು ಮಾಡಿಸಿಕೊಂಡು, ಸದರಿ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿದ್ದುಕೊಂಡು, ಅನುಭವಿಸಿಕೊಂಡು ಬರುತ್ತಿರುತ್ತಾರೆ.

**4.** ವಿಧ್ಯಾಮಾನಗಳು ಹೀಗಿರುವಾಗ ಪ್ರತಿವಾದಿಗಳಿಗೆ ದಾವಾ ಅನುಸೂಚಿ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಸ್ವಾಧೀನ ಮಾಲೀಕತ್ವ ಇಲ್ಲದಿದ್ದರೂ ಸಹ ಪ್ರತಿವಾದಿಗಳು ಈ ವಾದಿಗೆ ಆಗದವರ ಚಿತಾವಣೆ ಮೇರೆಗೆ ವಾದಿಯ ದಾವಾ ಅನುಸೂಚಿ ಸ್ವತ್ತಿನ ನೆಮ್ಮದಿಯಾದ ಸ್ವಾಧೀನಾನುಭವಕ್ಕೆ ತಂಟೆ ತಕರಾರು ಅಡ್ಡಿ ಆತಂಕ ಉಂಟು ಮಾಡುವ ಹವಣಿಕೆಯಲ್ಲಿರುತ್ತಾರೆ. ಹಾಗೂ ಸದರಿ ಪ್ರತಿವಾದಿಯರು ಹಣಬಲ ಮತ್ತು ಜನಬಲ ಮತ್ತು ರಾಜಕೀಯಬಲವುಳ್ಳ ವ್ಯಕ್ತಿಗಳಾಗಿದ್ದು, ಹೇಗಾದರೂ ಮಾಡಿ ಈ ವಾದಿಯನ್ನು ದಾವಾ ಅನುಸೂಚಿ ಸ್ವತ್ತಿನಿಂದ ವಕ್ಕಲೆಬ್ಬಿಸುವ ಪ್ರಯತ್ನದಲ್ಲಿರುತ್ತಾರೆ ಮತ್ತು ವಾದಿಯು ದಾವಾ ಅನುಸೂಚಿ ಸ್ವತ್ತಿನಲ್ಲಿ ಬೆಳೆದಿರುವ ಕೃಷಿ ಬೆಳೆಗಳನ್ನು ನಾಶ ಪಡಿಸುವ ಪ್ರಯತ್ನದಲ್ಲಿರುತ್ತಾರೆ.ಆದ್ದರಿಂದ ವಾದಿಯು ಮೇಲ್ಕಂಡ ದಾವೆಯನ್ನು ಪ್ರತಿವಾದಿಯರ ವಿರುದ್ಧ ಹಕ್ಕು ಘೋಷಣೆ ಮತ್ತು ಶಾಶ್ವತ ನಿರ್ಬಂದಾಕಾಜ್ಞೆಯನ್ನು ಕೋರಿ ಘನ ನ್ಯಾಯಲಯದಲ್ಲಿ ದಾಖಲು ಮಾಡಿರುತ್ತಾರೆ.

**5.** ಪ್ರತಿವಾದಿಗೆ ಸಮನ್ಸ್ ಜಾರಿಯಾದ ನಂತರ, ಪ್ರತಿವಾದಿಗಳು ಅವರ ಪರ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಲಿಖಿತ ಹೇಳಿಕೆ/ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ.

**6.** ಪ್ರತಿವಾದಿಯರ ಪ್ರತಿವಾದ ಪತ್ರದ ಸಾರಾಂಶ ಏನೆಂದರೇ ವಾದಿಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡ ಆತನ ಜೀವಿತಾ ಕಾಲದಲ್ಲಿ ತನ್ನ ಹಕ್ಕು ಮತ್ತು ಸ್ವಾಧೀನದಲಿದ್ದ ಮತ್ತು ಆತನಿಗೆ ಪಿತ್ರಾರ್ಜಿತವಾಗಿ ಮತ್ತು ಸ್ವಯಾರ್ಜಿತವಾಗಿ ಬಂದ ಬ್ಯಾಡರಹಳ್ಳಿ ಗ್ರಾಮಕ್ಕೆ ಸೇರಿದ ಸ.ನಂ. 50/1 ರ ಖುಷ್ಕಿ 0-10 ಗುಂಟೆ ಪ್ರದೇಶವನ್ನು ಮತ್ತು ಸ.ನಂ.93 ರ ಖುಷ್ಕಿ30 ಗುಂಟೆ ಪ್ರದೇಶವನ್ನು ವಾದಿಯ ಗಂಡ ನಿಂಗೇಗೌಡ ಉ: ಚಂದ್ರೇಗೌಡರವರು ಮಾರುಕಟ್ಟೆ ಬೆಲೆ. ರೂ 30,000/-. ಗಳಿಗೆ 1ನೇ

ಪ್ರತಿವಾದಿ ಕೃಷ್ಣೇಗೌಡರಿಗೆ ದಿನಾಂಕ:14.03.2000 ರಂದು ಶುದ್ಧ ಕ್ರಯಕ್ಕೆ ಪರಬಾರೆ ಮಾಡಿರುತ್ತಾರೆ. ಕ್ರಯದ ಮೇರೆ 1 ನೇ ಪ್ರತಿವಾದಿ ಮತ್ತು ಆತನ ಮಗ 2 ನೇ ಪ್ರತಿವಾದಿ ಹರೀಶ ಇಬ್ಬರು ಕ್ರಯದ ಲಾಗಾಯ್ತು ಸದರಿ ಜಮೀನುಗಳಿಗೆ ಹಕ್ಕುದಾರರಾಗಿ ಸ್ವಾಧೀನದಲ್ಲಿರುತ್ತಾರೆ. ಕ್ರಯದ ಮೇರೆ 1 ನೇ ಪ್ರತಿವಾದಿ ಕೃಷ್ಣೇಗೌಡರಿಗೆ ಮೇಲ್ಕಂಡ ಜಮೀನುಗಳ ಖಾತೆಯನ್ನು ಸಹ ಇಟ್ಟಿರುತ್ತಾರೆ. ಸದರಿ ಸಂಗತಿಗಳನ್ನು ವಾದಿ ಅಕ್ರಮ ಕಾಯ್ದೆ ಪಡೆಯುವ ಉದ್ದೇಶದಿಂದ ಮರೆಮಾಚಿರುತ್ತಾರೆ.

**7.** ಪ್ರತಿವಾದಿಯರು ಮುಂದುವರೆದು, 1 ನೇ ಪ್ರತಿವಾದಿಯು ವಾದಿಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡನಿಂದ ಬ್ಯಾಡರಹಳ್ಳಿ ಗ್ರಾಮದ ಸ.ನಂ. 90 ರ 0-30 ಗುಂಟೆ ಮತ್ತು ಸ.ನಂ. 50/1 ರ ಖುಷ್ಕಿ 0-10 ಗುಂಟೆ ಜಮೀನುಗಳನ್ನು ಕ್ರಯಕ್ಕೆ ಕೊಂಡ ಕಾಲಕ್ಕೆ ದಕ್ಷಿಣಕ್ಕೆ ವಾದಿಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡರು ಬ್ಯಾಡರಹಳ್ಳಿ ಗ್ರಾಮದ ಸರ್ಕಾರಿ ಗೋಮಾಳ ಸ.ನಂ. 50 ರಲ್ಲಿ ಸುಮಾರು 4-5 ಗುಂಟೆ ಜಮೀನನ್ನು ಬಗರ್ ಹುಕುಂ ಮೇಲೆ ಸಾಗುವಳಿ ಮಾಡುತ್ತಿದ್ದು ಈ ಜಮೀನನ್ನು ನಂತರ ವಾದಿಯ ಗಂಡ ಸಾಗುವಳಿ ಮಾಡದೇ ಬಿಟ್ಟ ಕಾರಣ ಸದರಿ ಜಮೀನಿನ ಬಾಜುದಾರರಾದ ಪ್ರತಿವಾದಿಗಳು ಈ ಜಮೀನನ್ನು ಸುಮಾರು 18 ವರ್ಷಗಳಿಂದ ಬಗರು ಹುಕ್ಕುಂ ಮೇಲೆ ಸಾಗುವಳಿ ಮಾಡಿಕೊಂಡು ಸ್ವಾಧೀನಾನುಭವದಲ್ಲಿರುತ್ತಾರೆ. ಈ ವಿಚಾರ ವಾದಿ ಮತ್ತು ಆಕೆಯ ಗಂಡ ನಿಂಗೇಗೌಡ ಉ: ಚಂದ್ರೇಗೌಡ ಮತ್ತು ಇವರುಗಳ ಕುಟುಂಬದವರಿಗೂ ಸಹ ತಿಳಿದಿರುತ್ತದೆ.

**8.** ವಾದಿ ಪ್ರತಿವಾದಿಗಳು ಬಗರು ಹುಕುಂ ಮೇಲೆ ಸಾಗುವಳಿ ಮಾಡುತ್ತಿದ್ದ ಬ್ಯಾಡರಹಳ್ಳಿ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸ.ನಂ 50 ರ ಬಾಬ್ತು ಸ್ವಾಧೀನದಲ್ಲಿರುವ ಸುಮಾರು 4-5 ಗುಂಟೆ ಜಮೀನನ್ನು ಲಪಟಾಯಿಸುವ ದುರುದ್ದೇಶದಿಂದ ಆಕೆಯು ಸ್ಥಳದಲ್ಲಿ ಪ್ರತಿವಾದಿಗಳಿಗೆ ಆಗದ ಕೆಲವು ಜನಗಳ ಚಿತಾವಣೆ ಮೇರೆ ಅಕ್ರಮ ಕಾಯ್ದೆ ಪಡೆಯುವ ಉದ್ದೇಶದಿಂದ ಪ್ರಸ್ತುತ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಹೂಡಿರುತ್ತಾರೆ. ವಾದಿ ದಾವಾ ಷಡ್ಯೂಲ್‌ನಲ್ಲಿ ತಿಳಿಸಿರುವ ಜಮೀನು ಆಕೆಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡ ದರಕಾಸ್ತು ನಡವಳಿಕೆಗಳ ಮೇರೆ ಇವರು ಬ್ಯಾಡರಹಳ್ಳಿ

ಗ್ರಾಮದ ಸ.ನಂ. 50/1 ರಲ್ಲಿ 25 ಗುಂಟೆ ಜಮೀನನ್ನು, ಸ.ನಂ. 50/2 ರಲ್ಲಿ 15 ಗುಂಟೆ ಜಮೀನನ್ನು ಮತ್ತು ಸ.ನಂ. 48/3 ರಲಿ 12 ಗುಂಟೆ ಜಮೀನನ್ನು ವಾದಿ ದಾವಾ ಪ್ಯಾರ 2 ರಲ್ಲಿ ತಿಳಿಸಿರುವಂತೆ ಸ್ವಾಧೀನದಲ್ಲಿರುವುದಿಲ್ಲ. ಈ ಜಮೀನುಗಳು ನಿಂಗೇಗೌಡ ಉ: ಚಂದ್ರೇಗೌಡನಿಗೆ ದಾವಾ ಷೆಡ್ಯೂಲ್‌ನಲ್ಲಿ ತಿಳಿಸಿರುವಂತೆ ಸ.ನಂ. 50/ಪಿ9 ಆಗಿ 0-35 ಗುಂಟೆ ವಿಸ್ತೀರ್ಣಕ್ಕೆ ದುರಸ್ತಾಗಿರುವುದಿಲ್ಲ. ಬ್ಯಾಡರಹಳ್ಳಿ ಗ್ರಾಮಕ್ಕೆ ಸೇರಿದ ಸರ್ಕಾರಿ ಗೋಮಾಳ ಸ.ನಂ.50 ರಲ್ಲಿ ಸುಮಾರು 135 ಎಕರೆ ಜಮೀನಿದ್ದು ಈ ಜಮೀನನ್ನು ಹಿಂದೆ ಅನೇಕ ಜನರುಗಳಿಗೆ ಬಗರು ಹುಕುಂ ಮೇರೆ ಹಂತ ಹಂತವಾಗಿ ಮಂಜೂರು ಮಾಡಿದರೂ ಸಹ ಮಂಜೂರಿದಾರರುಗಳು ಮಂಜೂರಿ ವಿಸ್ತೀರ್ಣದಂತೆ ಸ್ವಾಧೀನಾನುಭವದಲ್ಲಿರುವುದಿಲ್ಲ ಮತ್ತು ಮಂಜೂರು ಮಾಡಿದ ಜಮೀನುಗಳನ್ನು ಸಹ ಈ ಲಾಗಾಯ್ತು ದರಕಾಸ್ತು ನಡವಳಿಕೆಗಳ ಮೇರೆ ದುರಸ್ತು ಮಾಡಿರುವುದಿಲ್ಲ. ವಾದಿಯ ಗಂಡ ನಿಂಗೇಗೌಡ ಉ: ಚಂದ್ರೇಗೌಡನಿಗೆ ದಾವಾ ಷಡ್ಯೂಲ್ ಸ್ವತ್ತಿಗೆ ಹಕ್ಕುದಾರರಾಗಿ ಸ್ವಾಧೀನದಲ್ಲಿರುವುದಿಲ್ಲ ಅದೇ ರೀತಿ ವಾದಿಯು ಸಹ ದಾವಾ ಷಡ್ಯೂಲ್ ಜಮೀನಿಗೆ ಆಕೆಯ ಗಂಡ ಗತಿಸಿದ ನಂತರ ಹಕ್ಕುದಾರರಾಗಿ ಸ್ವಾಧೀನದಲ್ಲಿರುವುದಿಲ್ಲ. ಆ ಕಾರಣ ವಾದಿ ಶುದ್ಧ ಹಸ್ತಳಾಗಿ ನ್ಯಾಯಾಲಯಕ್ಕೆ ಬಂದಿರುವುದಿಲ್ಲ ಆ ಕಾರಣ ವಾದಿಯ ದಾವೆಯಲ್ಲಿ ಕೋರಿರುವ ಯಾವುದೇ ಪರಿಹಾರಗಳಿಗೂ ಸಹ ಅರ್ಹರಲ್ಲ. ಹಾಗೂ ಈ ದಾವೆಯನ್ನು ವಜಾ ಗೊಳಿಸಬೇಕಾಗಿ ಕೋರಿರುತ್ತಾರೆ.

**9.** ವಾದಪತ್ರದ ಹಾಗೂ ಲಿಖಿತ ಹೇಳಿಕೆಯನ್ನು ಸಂಗತಿಗಳನ್ನು ಗಮನಿಸಿ, ಈ ನ್ಯಾಯಾಲಯಕ್ಕೆ ಈ ಕೆಳಕಂಡ ವಿವಾದಾಂಶಗಳನ್ನು ರಚಿಸಿದೆ.

**:ISSUES:**

1. Whether the plaintiff proves that, the suit schedule properties granted to her husband she became the owner?

2. Whether the plaintiff proves that, she is in peaceful possession of the suit property?

3. Whether the plaintiff proves that, the alleged interference caused by defendants?

4. Whether the defendant proves that, the plaintiff husband was sold the suit schedule properties to him?

5. Whether the plaintiff proves that, she is entitled for the reliefs prayed for?

6. What order or Decree?

**10.** ವಾದಿಯ ವಾದಪತ್ರದ ಸಂಗತಿಗಳನ್ನು ನಿರೂಪಿಸಲು, ಸಾಕ್ಷಿದಾರರಾದ ಶರತ್.ಬಿ.ಸಿ ರವರು ಪಿ.ಡಬ್ಲ್ಯೂ.1 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ತನ್ನ ಪರವಾಗಿ ಒಟ್ಟು.19 ದಾಖಲೆಗಳನ್ನು ನಿಪಿ.1 ರಿಂದ 19 ರವರೆಗೆ ಗುರುತಿಸಿಕೊಂಡಿರುತ್ತಾರೆ. ನಂತರ ಅಣ್ಣೇಗೌಡ ರವರು ಪಿ.ಡಬ್ಲ್ಯೂ.2 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ, ನಂತರ ಶಿವರಾಜು ರವರು ಪಿ.ಡಬ್ಲ್ಯೂ.3 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ನಂತರ ಪ್ರತಿವಾದಿಯರ ಪರ ವಕೀಲರು ಪಿ.ಡಬ್ಲ್ಯೂ.1 ರಿಂದ ಪಿ.ಡಬ್ಲ್ಯೂ.3 ರವರನ್ನು ಪಾಟೀಸವಾಲು ಮಾಡಿರುತ್ತಾರೆ.

**11.** ಮುಂದುವರೆದು 1ನೇ ಪ್ರತಿವಾದಿಯು, ವಾದಿಯ ವಾದಪತ್ರದ ಸಂಗತಿಗಳನ್ನು ಅಲ್ಲಗೆಯಲು, ತನ್ನನ್ನು ತಾನು ಡಿ.ಡಬ್ಲ್ಯೂ.1 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ತನ್ನ ಪರವಾಗಿ ಒಟ್ಟು.30 ದಾಖಲೆಯನ್ನು ನಿಡಿ.01 ರಿಂದ ನಿಡಿ.30 ಎಂದು ಗುರುತಿಸಿಕೊಂಡಿರುತ್ತಾರೆ. ನಂತರ ತನ್ನ ಪರವಾಗಿ ಶಂಕರಲಿಂಗೇಗೌಡ ಎಂಬ ಸಾಕ್ಷಿದಾರರಾನ್ನು ಡಿ.ಡಬ್ಲ್ಯೂ.2 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ನಂತರ ವಾದಿಯರ ಪರ ವಕೀಲರು ಡಿ.ಡಬ್ಲ್ಯೂ.1 ಮತ್ತು ಡಿ.ಡಬ್ಲ್ಯೂ.2 ರವರನ್ನು ಪಾಟೀಸವಾಲು ಮಾಡಿರುತ್ತಾರೆ. ಡಿ.ಡಬ್ಲ್ಯೂ.2 ರವರ ಪಾಟೀಸವಾಲಿನ ಸಮಯದಲ್ಲಿ ವಾದಿಯರ ಪರ ವಕೀಲರು ಡಿ.ಡಬ್ಲ್ಯೂ.2 ರವರ

ಮೂಲಕ ನಿಪಿ.20 ರ ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ.

**12.** ಉಭಯಪಕ್ಷಗಾರರ ಪರ ವಕೀಲರ ವಾದಗಳನ್ನು ಆಲಿಸಿ, ದಾಖಲೆಗಳನ್ನು ಪರಿಶೀಲಿಸಲಾಯಿತು.

**13.** ಈ ಮೇಲಿನ ವಿವಾದಾಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿರುತ್ತದೆ.

| | | |
|---|---|---|
| ವಿವಾದಾಂಶ ಸಂಖ್ಯೆ: 1 ರಿಂದ 3 ಮತ್ತು 5 | ಃ | **ನಕಾರಾತ್ಮಕವಾಗಿ** |
| ವಿವಾದಾಂಶ ಸಂಖ್ಯೆ: 4 | ಃ | ಸಕಾರಾತ್ಮಕವಾಗಿ |
| ವಿವಾದಾಂಶ ಸಂಖ್ಯೆ: 6 | ಃ | ಅಂತಿಮ ಆದೇಶದಂತೆ |

ಈ ಕೆಳಕಂಡ ಕಾರಣಗಳಿಗಾಗಿ,

## : : ಕಾರಣಗಳು : :

**14.** **ವಿವಾದಾಂಶ ಸಂಖ್ಯೆ – 1 ಃ** ವಾದಿಯರ ದಾವಾ ಏನೆಂದರೆ ವಾದಿ ಮತ್ತು ಪ್ರತಿವಾದಿಯವರು ಒಂದೇ ಗ್ರಾಮದವರಾಗಿರುತ್ತಾರೆ. ಸದರಿ ದಾವಾ ಷೆಡ್ಯೂಲ್ ಸ್ವತ್ತು ಮೂಲತಃ ವಾದಿಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡರವರಿಗೆ 1994 ನೇ ಸಾಲಿನಲ್ಲಿ ಇದೇ ಬ್ಯಾಡರಹಳ್ಳಿ ಗ್ರಾಮದ ಸರ್ವೆ ನಂಬರ್ 50/ಬ್ಲಾಕ್1 ರಲ್ಲಿ 25.00 ಗುಂಟೆ ಜಮೀನು ಮತ್ತು ಇದೇ ಸರ್ವೆ ನಂಬರ್ 50/ಬ್ಲಾಕ್ 2 ರಲ್ಲಿ 15 ಗುಂಟೆ ಜಮೀನು ಮತ್ತು ಸರ್ವೆ ನಂಬರ್ 48/3 ರಲ್ಲಿ 12 ಗುಂಟೆ ಜಮೀನು ಸರ್ಕಾರದಿಂದ ಮಂಜೂರಾಗಿದ್ದು, ಅದರಲ್ಲಿ 5 ಗುಂಟೆ ಖರಾಬು ಕಳೆದು ವಾದಿಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡ ಬಿನ್ ನಂಜುಂಡೇಗೌಡರವರ ಹೆಸರಿಗೆ ಎಂ ಆರ್ ನಂಬರ್ 19/1998-99 ರಂದು ಖಾತೆ ವಗೈರೆ ಕೂಡ ಆಗಿರುತ್ತದೆ.

**15.** ವಿಧ್ಯಾಮಾನಗಳು ಹೀಗಿರುವಾಗ ವಾದಿಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡ ಬಿನ್ ನಂಜುಂಡೇಗೌಡರವರು ದಿನಾಂಕ:08.04.2017 ರಂದು ಮರಣ ಹೊಂದಿದ್ದು, ಅವರ ಮರಣ ನಂತರ ಸದರಿ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ

ವಾದಿ ಮತ್ತು ವಾದಿಯ ಕುಟುಂಬದವರು ಸ್ವಾಧೀನದಲ್ಲಿದ್ದುಕೊಂಡು ಅನುಭವಿಸಿಕೊಂಡು ಬರುತ್ತಿರುತ್ತಾರೆ. ವಾದಿಯು ಸದರಿ ದಾವಾ ಷೆಡ್ಯೂಲ್ ಸ್ವತ್ತನ್ನು ತನ್ನ ಗಂಡ ನಿಂಗೇಗೌಡ ಉಃ ಚಂದ್ರೇಗೌಡರವರ ಮರಣದ ನಂತರ ತನ್ನ ಹೆಸರಿಗೆ ಎಂ.ಆರ್ ಹೆಚ್ 7/2017-18 ರಂತೆ ಪೌತಿ ಖಾತೆಯನ್ನು ಮಾಡಿಸಿಕೊಂಡು, ಸದರಿ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿದ್ದುಕೊಂಡು, ಅನುಭವಿಸಿಕೊಂಡು ಬರುತ್ತಿರುತ್ತಾರೆ.

**16.** ವಿಧ್ಯಾಮಾನಗಳು ಹೀಗಿರುವಾಗ ಪ್ರತಿವಾದಿಗಳಿಗೆ ದಾವಾ ಅನುಸೂಚಿ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಸ್ವಾಧೀನ ಮಾಲೀಕತ್ವ ಇಲ್ಲದಿದ್ದರೂ ಸಹ ಪ್ರತಿವಾದಿಗಳು ಈ ವಾದಿಗೆ ಆಗದವರ ಚಿತಾವಣೆ ಮೇರೆಗೆ ವಾದಿಯ ದಾವಾ ಅನುಸೂಚಿ ಸ್ವತ್ತಿನ ನೆಮ್ಮದಿಯಾದ ಸ್ವಾಧೀನಾನುಭವಕ್ಕೆ ತಂಟೆ ತಕರಾರು ಅಡ್ಡಿ ಆತಂಕ ಉಂಟು ಮಾಡುವ ಹವಣಿಕೆಯಲ್ಲಿರುತ್ತಾರೆ ಎಂಬುದಾಗಿದೆ.

**17.** ಪ್ರತಿವಾದಿಯರ ಪ್ರತಿವಾದ ಪತ್ರದ ಸಾರಾಂಶ ಏನೆಂದರೇ ವಾದಿಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡ ಆತನ ಜೀವಿತಾ ಕಾಲದಲ್ಲಿ ತನ್ನ ಹಕ್ಕು ಮತ್ತು ಸ್ವಾಧೀನದಲಿದ್ದ ಮತ್ತು ಆತನಿಗೆ ಪಿತ್ರಾರ್ಜಿತವಾಗಿ ಮತ್ತು ಸ್ವಯಾರ್ಜಿತವಾಗಿ ಬಂದ ಬ್ಯಾಡರಹಳ್ಳಿ ಗ್ರಾಮಕ್ಕೆ ಸೇರಿದ ಸ.ನಂ. 50/1 ರ ಖುಷ್ಕಿ 0-10 ಗುಂಟೆ ಪ್ರದೇಶವನ್ನು ಮತ್ತು ಸ.ನಂ.93 ರ ಖುಷ್ಕಿ30 ಗುಂಟೆ ಪ್ರದೇಶವನ್ನು ವಾದಿಯ ಗಂಡ ನಿಂಗೇಗೌಡ ಉ: ಚಂದ್ರೇಗೌಡರವರು ಮಾರುಕಟ್ಟೆ ಬೆಲೆ.ರೂ 30,000/- ಗಳಿಗೆ 1 ನೇ ಪ್ರತಿವಾದಿ ಕೃಷ್ಣೇಗೌಡರಿಗೆ ದಿನಾಂಕ:14.03.2000 ರಂದು ಶುದ್ದ ಕ್ರಯಕ್ಕೆ ಪರಬಾರೆ ಮಾಡಿರುತ್ತಾರೆ. ಕ್ರಯದ ಮೇರೆ 1 ನೇ ಪ್ರತಿವಾದಿ ಮತ್ತು ಆತನ ಮಗ 2 ನೇ ಪ್ರತಿವಾದಿ ಹರೀಶ ಇಬ್ಬರು ಕ್ರಯದ ಲಾಗಾಯ್ತು ಸದರಿ ಜಮೀನುಗಳಿಗೆ ಹಕ್ಕುದಾರರಾಗಿ ಸ್ವಾಧೀನದಲ್ಲಿರುತ್ತಾರೆ. ಕ್ರಯದ ಮೇರೆಗೆ 1 ನೇ ಪ್ರತಿವಾದಿ ಕೃಷ್ಣೇಗೌಡರಿಗೆ ಮೇಲ್ಕಂಡ ಜಮೀನುಗಳ ಖಾತೆಯನ್ನು ಸಹ ಇಟ್ಟಿರುತ್ತಾರೆ.

**18.** ಪ್ರತಿವಾದಿಯರು ಮುಂದುವರೆದು, 1 ನೇ ಪ್ರತಿವಾದಿಯು ವಾದಿಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡನಿಂದ ಬ್ಯಾಡರಹಳ್ಳಿ ಗ್ರಾಮದ ಸ.ನಂ. 90 ರ 0-

30 ಗುಂಟೆ ಮತ್ತು ಸ.ನಂ. 50/1 ರ ಖುಷ್ಕಿ 0-10 ಗುಂಟೆ ಜಮೀನುಗಳನ್ನು ಕ್ರಯಕ್ಕೆ ಕೊಂಡ ಕಾಲಕ್ಕೆ ದಕ್ಷಿಣಕ್ಕೆ ವಾದಿಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡರು ಬ್ಯಾಡರಹಳ್ಳಿ ಗ್ರಾಮದ ಸರ್ಕಾರಿ ಗೋಮಾಳ ಸ.ನಂ.50 ರಲ್ಲಿ ಸುಮಾರು 4-5 ಗುಂಟೆ ಜಮೀನನ್ನು ಬಗರ್ ಹುಕುಂ ಮೇಲೆ ಸಾಗುವಳಿ ಮಾಡುತ್ತಿದ್ದು ಈ ಜಮೀನನ್ನು ನಂತರ ವಾದಿಯ ಗಂಡ ಸಾಗುವಳಿ ಮಾಡದೇ ಬಿಟ್ಟ ಕಾರಣ ಸದರಿ ಜಮೀನಿನ ಬಾಜುದಾರರಾದ ಪ್ರತಿವಾದಿಗಳು ಈ ಜಮೀನನ್ನು ಸುಮಾರು 18 ವರ್ಷಗಳಿಂದ ಬಗರು ಹುಕ್ಕುಂ ಮೇಲೆ ಸಾಗುವಳಿ ಮಾಡಿಕೊಂಡು ಸ್ವಾಧೀನಾನುಭವದಲ್ಲಿರುತ್ತಾರೆ.

**19.** ಪ್ರತಿವಾದಿಗಳು ಬಗರು ಹುಕುಂ ಮೇಲೆ ಸಾಗುವಳಿ ಮಾಡುತ್ತಿದ್ದ ಬ್ಯಾಡರಹಳ್ಳಿ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸ.ನಂ 50 ರ ಬಾಬ್ತು ಸ್ವಾಧೀನದಲ್ಲಿರುವ ಸುಮಾರು 4-5 ಗುಂಟೆ ಜಮೀನನ್ನು ಲಪಟಾಯಿಸುವ ದುರುದ್ದೇಶದಿಂದ ಆಕೆಯು ಸ್ಥಳದಲ್ಲಿ ಪ್ರತಿವಾದಿಗಳಿಗೆ ಆಗದ ಕೆಲವು ಜನಗಳ ಚಿತಾವಣೆ ಮೇರೆ ಅಕ್ರಮ ಕಾಯ್ದೆ ಪಡೆಯುವ ಉದ್ದೇಶದಿಂದ ಪ್ರಸ್ತುತ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಹೂಡಿರುತ್ತಾರೆ. ವಾದಿ ದಾವಾ ಷಡ್ಯೂಲ್‌ನಲ್ಲಿ ತಿಳಿಸಿರುವ ಜಮೀನು ಆಕೆಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡ ದರಕಾಸ್ತು ನಡವಳಿಕೆಗಳ ಮೇರೆ ಇವರು ಬ್ಯಾಡರಹಳ್ಳಿ ಗ್ರಾಮದ ಸ.ನಂ. 50/1 ರಲ್ಲಿ 25 ಗುಂಟೆ ಜಮೀನನ್ನು, ಸ.ನಂ. 50/2 ರಲ್ಲಿ 15 ಗುಂಟೆ ಜಮೀನನ್ನು ಮತ್ತು ಸ.ನಂ. 48/3 ರಲಿ 12 ಗುಂಟೆ ಜಮೀನನ್ನು ವಾದಿ ದಾವಾ ಪ್ಯಾರ 2 ರಲ್ಲಿ ತಿಳಿಸಿರುವಂತೆ ಸ್ವಾಧೀನದಲ್ಲಿರುವುದಿಲ್ಲ. ಈ ಜಮೀನುಗಳು ನಿಂಗೇಗೌಡ ಉ: ಚಂದ್ರೇಗೌಡನಿಗೆ ದಾವಾ ಷೆಡ್ಯೂಲ್‌ನಲ್ಲಿ ತಿಳಿಸಿರುವಂತೆ ಸ.ನಂ. 50/ಪಿ9 ಆಗಿ 00-35 ಗುಂಟೆ ವಿಸ್ತೀರ್ಣಕ್ಕೆ ದುರಸ್ತಾಗಿರುವುದಿಲ್ಲ. ಬ್ಯಾಡರಹಳ್ಳಿ ಗ್ರಾಮಕ್ಕೆ ಸೇರಿದ ಸರ್ಕಾರಿ ಗೋಮಾಳ ಸ.ನಂ.50 ರಲ್ಲಿ ಸುಮಾರು 135 ಎಕರೆ ಜಮೀನಿದ್ದು ಈ ಜಮೀನನ್ನು ಹಿಂದೆ ಅನೇಕ ಜನರುಗಳಿಗೆ ಬಗರು ಹುಕುಂ ಮೇರೆ ಹಂತ ಹಂತವಾಗಿ ಮಂಜೂರು ಮಾಡಿದರೂ ಸಹ ಮಂಜೂರಿದಾರರುಗಳು ಮಂಜೂರಿ ವಿಸ್ತೀರ್ಣದಂತೆ ಸ್ವಾಧೀನಾನುಭವದಲ್ಲಿರುವುದಿಲ್ಲ ಮತ್ತು ಮಂಜೂರು ಮಾಡಿದ ಜಮೀನುಗಳನ್ನು ಸಹ ಈ ಲಾಗಾಯ್ತು ದರಕಾಸ್ತು ನಡವಳಿಕೆಗಳ ಮೇರೆ ದುರಸ್ತು ಮಾಡಿರುವುದಿಲ್ಲ. ವಾದಿಯ ಗಂಡ ನಿಂಗೇಗೌಡ ಉ: ಚಂದ್ರೇಗೌಡನಿಗೆ ದಾವಾ

ಷಡ್ಯೂಲ್ ಸ್ವತ್ತಿಗೆ ಹಕ್ಕುದಾರರಾಗಿ ಸ್ವಾಧೀನದಲ್ಲಿರುವುದಿಲ್ಲ ಅದೇ ರೀತಿ ವಾದಿಯು ಸಹ ದಾವಾ ಷಡ್ಯೂಲ್ ಜಮೀನಿಗೆ ಆಕೆಯ ಗಂಡ ಗತಿಸಿದ ನಂತರ ಹಕ್ಕುದಾರರಾಗಿ ಸ್ವಾಧೀನದಲ್ಲಿರುವುದಿಲ್ಲ ಎಂಬುದಾಗಿದೆ.

**20.** ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 101 ರ ರೀತ್ಯ ಯಾವ ವ್ಯಕ್ತಿ ತಾನು ಹೇಳಿದ ವಾಸ್ತವಿಕತೆಗಳ ಅಸ್ತಿತ್ವದ ಮೇಲೆ ಅವಲಂಬಿಸಿರುವ ಯಾವುದೇ ಕಾನೂನು ಸಮ್ಮತ, ಅಧಿಕಾರ ಬಾದ್ಯತೆಯ ಬಗ್ಗೆ ನ್ಯಾಯಾಲಯವು ತೀರ್ಪು ಕೊಡಬೇಕೆಂದು ಇಚ್ಛಿಸುತ್ತಾನೋ ಅಂತ ವ್ಯಕ್ತಿ ಅಂತಹ ವಾಸ್ತವಿಕತೆಗಳು ಅಸ್ತಿತ್ವದಲ್ಲಿ ಇದೆ ಎಂದು ಸಾಬೀತು ಮಾಡತಕ್ಕದ್ದು. ಈ ದಾವೆಯಲ್ಲಿ ಕೋರಿರುವ ಪರಿಹಾರವನ್ನು ಪಡೆಯಬೇಕಾದರೆ ತಮ್ಮ ಮೇಲಿರುವ ರುಜುವಾತಿನ ಭಾರವನ್ನು ಈ ವಾದಿಯೇ ರುಜುವಾತು ಪಡಿಸಬೇಕಾಗಿದೆ. ವಾದಿಯು ತಮ್ಮ ವಾದಪತ್ರದ ಸಂಗತಿಗಳನ್ನು ರುಜುವಾತು ಪಡಿಸುವ ಇವರ ಹೊಣೆಗಾರಿಕೆಯನ್ನು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 101 ಮತ್ತು 103 ರಂತೆ ಹೊಂದಿರುತ್ತಾರೆ.

**21.** ವಾದಿಯು ತನ್ನ ವಾದಪತ್ರದ ಸಂಗತಿಗಳನ್ನು ನಿರೂಪಿಸಲು ಮುಕ್ತ್ಯಾರು ನಾಮೆಯಂತೆ ಅಧಿಕಾರ ಪಡೆದ ತನ್ನ ಮಗನಾದ ಶರತ್.ಬಿ.ಸಿ ರವರನ್ನು ಪಿ.ಡಬ್ಲ್ಯೂ.1 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ಸದರಿಯವರು ತಮ್ಮ ಮುಖ್ಯ ವಿಚಾರಣೆ ಶಪಥ ಪತ್ರವನ್ನು ಸಲ್ಲಿಸಿದ್ದು, ಸದರಿ ಶಪಥ ಪತ್ರದಲ್ಲಿ ವಾದಪತ್ರದಲ್ಲಿರುವ ಸಂಗತಿಗಳನ್ನು ಪುನರುಚ್ಚರಿಸಿರುತ್ತಾರೆ. ತನ್ನ ಪರವಾಗಿ ಇಬ್ಬರು ಸಾಕ್ಷಿದಾರರನ್ನು ಪಿ.ಡಬ್ಲ್ಯೂ.2 ಮತ್ತು ಪಿ.ಡಬ್ಲ್ಯೂ.3 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ ಇವರು ತನ್ನ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ವಾದಿಯ ಪರವಾಗಿ ನಿಪಿ.1 ರಿಂದ 19 ಎಂದು ದಾಖಲೆಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿರುತ್ತಾರೆ.

**22.** ಪ್ರತಿವಾದಿಯರು ವಾದಿಯ ವಾದಪತ್ರದ ಸಂಗತಿಗಳನ್ನು ಅಲ್ಲಗಲೆಯಲು, 1 ನೇ ಪ್ರತಿವಾದಿ ಡಿ.ಡಬ್ಲ್ಯೂ.1 ಎಂದು ವಿಚಾರಣೆಗೆ ಒಳಪಡಿಸಿಕೊಂಡು ತಮ್ಮ ಮುಖ್ಯ ವಿಚಾರಣೆ ಶಪಥ ಪತ್ರವನ್ನು ಸಲ್ಲಿಸಿದ್ದು, ಸದರಿ ಶಪಥ ಪತ್ರದಲ್ಲಿ ಪ್ರತಿವಾದಪತ್ರದಲ್ಲಿರುವ ಸಂಗತಿಗಳನ್ನು ಪುನರುಚ್ಚರಿಸಿರುತ್ತಾರೆ. ಇವರು ತನ್ನ ಮೌಖಿಕ

ಸಾಕ್ಷ್ಯದ ಸಮರ್ಥನೆಗಾಗಿ ಒಟ್ಟು 30 ದಾಖಲೆಗಳನ್ನು ನಿಡಿ.1 ರಿಂದ 30 ರವರೆಗೆ ಗುರುತಿಸಿಕೊಂಡಿರುತ್ತಾರೆ. ನಂತರ ಪ್ರತಿವಾದಿಯರು ಒಬ್ಬ ಸಾಕ್ಷಿದಾರರನ್ನು ಡಿ.ಡಬ್ಲ್ಯೂ.2 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ವಾದಿಯರ ಪರ ವಕೀಲರು ಡಿ.ಡಬ್ಲ್ಯೂ.2 ರವರ ಮೂಲಕ ನಿಪಿ.20 ದಾಖಲೆಯನ್ನು ಗುರುತಿಸಿಕೊಂಡಿರುತ್ತಾರೆ.

**23.** ಪಿಡಬ್ಲ್ಯೂ.1 ರವರು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ನಿಪಿ.1 ಜಿ.ಪಿ.ಎ, ನಿಪಿ.2 ಮಂಜೂರಾತಿ ಪತ್ರದ ದೃಢೀಕೃತ ನಕಲು, ನಿಪಿ.3 ಪಹಣಿಯ ದೃಢೀಕೃತ ನಕಲು, ನಿಪಿ.4 ದಿಃ29.09.1998 ರಂದು ಆದ ನೊಂದಾಯಿತ ಕ್ರಯ ಪತ್ರದ ದೃಢೀಕೃತ ನಕಲು, ನಿಪಿ.5 ನೊಂದಾಯಿತ ಕ್ರಯ ಪತ್ರದ ದೃಢೀಕೃತ ನಕಲು, ನಿಪಿ.6 ಭೂ ಮಂಜೂರಾತಿ ಪತ್ರದ ದೃಢೀಕೃತ ನಕಲು, ನಿಪಿ.7 ಅಧೀಕೃತ ಜ್ಞಾಪನ ಪತ್ರ, ನಿಪಿ.8 ನಕಾಶೆಯ ದೃಢೀಕೃತ ನಕಲು, ನಿಪಿ.9 ತನ್ನ ತಂದೆಯ ಮರಣ ಪ್ರಮಾಣ ಪತ್ರ, ನಿಪಿ.10 ಮತ್ತು 11 ಎರಡು ಎಂ.ಆರ್ ನ ಪ್ರತಿಗಳು, ನಿಪಿ.12 ರಿಂದ 14 ಮೂರು ಪಹಣಿ ಪತ್ರಿಕೆಗಳು, ನಿಪಿ.15 ರಿಂದ 18 ನಾಲ್ಕು ಎಂ.ಆರ್ ನ ದೃಢೀಕೃತ ನಕಲು ಪ್ರತಿಗಳು, ನಿಪಿ.19 ಪಹಣಿ ಪತ್ರಿಕೆ, ಹಾಗೂ ನಿಪಿ.20 ಪಹಣಿ ಪತ್ರಿಕೆ ಸ್ವತ್ತುಗಳಾಗಿರುತ್ತವೆ.

**24.** ಪ್ರತಿವಾದಿಯರ ದಾಖಲೆಗಳನ್ನು ಪರಿಶೀಲಿಸಿದಾಗ ಸದರಿಯವರು ನಿಡಿ.1 ದಿಃ14.03.2000 ರಂದು 1 ನೇ ಪ್ರತಿವಾದಿಯ ಹೆಸರಿಗೆ ಆದ ನೊಂದಾಯಿತ ಕ್ರಯಪತ್ರ, ನಿಡಿ.2 ಮ್ಯುಟೇಶನ್ ರಿಜಿಸ್ಟರ್, ನಿಡಿ.3 ರಿಂದ 27 ಪಹಣಿ ಪತ್ರಿಕೆಗಳು, ನಿಡಿ.28 ಒಂದು ಪಟ್ಟಾ ಮತ್ತು ರಶೀದಿ ಪುಸ್ತಕ, ನಿಡಿ.29 ಮತ್ತು 30 ಎರಡು ಕಂದಾಯ ಪಾವತಿ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ.

**25.** ವಾದಿ ಪರ ಪಿಡಬ್ಲ್ಯೂ.1 ಮತ್ತು 2 ರವರು, ಮುಖ್ಯ ವಿಚಾರಣೆಯ ಶಪಥ ಪತ್ರದಲ್ಲಿ ವಾದಿಯರ ಪ್ರಕರಣಕ್ಕೆ ಪೂರಕವಾಗುವಂತೆ ಸಾಕ್ಷ್ಯವನ್ನು ಬರೆಯಿಸಿದ್ದು, ತನ್ನ ಪಾಟೀ ಸವಾಲಿನಲ್ಲಿ ಯಾವ ರೀತಿ ಸಾಕ್ಷ್ಯ ನುಡಿದಿದ್ದಾರೆ ಎಂಬುದನ್ನು

ಪರಿಶೀಲಿಸಬೇಕಾಗಿದೆ. ವಾದಿ ಪರ ಪಿಡಬ್ಲ್ಯೂ.1 ಮತ್ತು 2 ರವರು ತನ್ನ ಪಾಟೀ ಸವಾಲಿನಲ್ಲಿ ಪ್ರತಿವಾದಿಗಳು ಯಾವ ದಿನಾಂಕದಂದು ತಮ್ಮ ಸ್ವತ್ತಿಗೆ ಅತೀಕ್ರಮ ಪ್ರವೇಶ ಮಾಡಿರುತ್ತಾರೆ ಎಂದು ಹೇಳಲಾಗುವುದಿಲ್ಲ ಎಂದು ನುಡಿದಿದ್ದು, ಸ.ನಂ.50 ರಲ್ಲಿ ಸುಮಾರು 135 ಎಕರೆ ಸರ್ಕಾರಿ ಗೋಮಾಳ ಇದೆ ಎಂಬುದನ್ನು ಒಪ್ಪುತ್ತಾರೆ. ಅಲ್ಲದೇ ಸ.ನಂ.50/1 ರಲ್ಲಿ 10 ಗುಂಟೆ ವಿಸ್ತೀರ್ಣ ಹಾಗೂ ಸ.ನಂ.93 ರಲ್ಲಿ 30 ಗುಂಟೆ ವಿಸ್ತೀರ್ಣದ ಸ್ವತ್ತನ್ನು ಮಾರಾಟ ಮಾಡಿರುವುದಿಲ್ಲ ಆದರೆ ಸ.ನಂ.93 ರಲ್ಲಿ 30 ಗುಂಟೆ ವಿಸ್ತೀರ್ಣದ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂಬುದಾಗಿ ನುಡಿದಿರುತ್ತಾರೆ. ಹಾಗೂ 1 ನೇ ಪ್ರತಿವಾದಿಯು 30 ಗುಂಟೆ ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂಬುದನ್ನು ಒಪ್ಪುತ್ತಾರೆ. ವಾದಿಯು ವಾದ ಪತ್ರದ ಸಂಗತಿಗಳನ್ನು ರುಜುವಾತುಪಡಿಸಲು ತನ್ನ ಪರವಾಗಿ ಇಬ್ಬರು ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿದ್ದು ಸದರಿಯವರು ವಾದ ಪತ್ರದ ಅಂಶಗಳಿಗೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ, ಅಲ್ಲದೇ ಪ್ರಾಸಾ.2 ರವರು ಪಾಟೀ ಸವಾಲಿನಲ್ಲಿ ದಾವಾ ಸ್ವತ್ತಿನ ಚಕ್ಕುಬಂದಿ ಗೊತ್ತಿಲ್ಲ, ದಾವಾ ಸ್ವತ್ತು ಯಾರಿಗೆ ಮಂಜೂರಾಗಿದೆ ಎಂದು ಗೊತ್ತಿಲ್ಲ ಹಾಗೂ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ತಾನು ನೋಡಿಲ್ಲ ಎಂದು ನುಡಿದಿರುತ್ತಾರೆ. ಮುಂದುವರೆದು ಸ.ನಂ.50/1 ಮತ್ತು 50/2 ರ ನಡುವೆ 200 ಮೀ. ಅಂತರವಿದೆ ಹಾಗೂ ಅವುಗಳ ನಡುವೆ 5-6 ಜನರ ಜಮೀನು ಬರುತ್ತದೆ ಎಂದು ನುಡಿದಿರುತ್ತಾರೆ. ಸದರೀ ಸಾಕ್ಷಿಯು ಬ್ಯಾಡರಹಳ್ಳಿ ಗ್ರಾಮದ ಸ.ನಂ.50 ರಲ್ಲಿ ಸುಮಾರು 135 ಎಕರೆ ವಿಸ್ತೀರ್ಣದ ಸ್ವತ್ತಿನ ಬಗ್ಗೆ ಗೊತಿಲ್ಲ ಎಂದು ನುಡಿದಿದ್ದು ಸದರೀ ಜಮೀನಿನಲ್ಲಿ ಬಗರ್ ಹುಕ್ಕುಂ ಆಧಾರದ ಮೇಲೆ ಹಲವಾರು ಜನರಿಗೆ ಮಂಜೂರು ಮಾಡಲಾಗಿದೆ ಎಂಬುದನ್ನು ಒಪ್ಪುತ್ತಾರೆ. ಅಲ್ಲದೇ ಕೆಲವರು ರಾಜಕೀಯ ಪ್ರಭಾವ ಬೀರಿ ಹೆಚ್ಚಿನ ವಿಸ್ತೀರ್ಣದ ಸ್ವತ್ತನ್ನು ಮಂಜೂರು ಮಾಡಿಕೊಂಡಿರುತ್ತಾರೆ ಎಂಬುದನ್ನು ಒಪ್ಪುತ್ತಾರೆ, ಉಳುಮೆ ಮಾಡದೆ ಜಮೀನು ಮಂಜೂರು ಮಾಡಿಸಿಕೊಂಡಿದ್ದರಿಂದ ಸದರಿ ಜಮೀನುಗಳು ದುರುಸ್ತಾಗಿರುವುದಿಲ್ಲ ಎಂಬುದಾಗಿ ಒಪ್ಪುತ್ತಾರೆ.

**26.** 1 ನೇ ಪ್ರತಿವಾದಿಯು ಈ ಪ್ರಕರಣದಲ್ಲಿ ತನ್ನನ್ನು ಡಿ.ಬ್ಲ್ಯೂ.1 ಎಂದು ವಿಚಾರಣೆಗೆ ಒಳಪಡಿಸಿದ್ದು, ಸದರಿಯವರು ವಾದಿ ಪರ ವಕೀಲರ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ ಅಲ್ಲದೇ ವಾದಿಯ ಗಂಡನಿಗೆ ಸರ್ಕಾರದಿಂದ ಕೆಲವು ಸ್ವತ್ತುಗಳು ಮಂಜೂರಾಗಿದ್ದ ಬಗ್ಗೆ ತನಗೆ ಗೊತ್ತಿಲ್ಲ ಎಂದು ನುಡಿದಿದ್ದು, 10 ಗುಂಟೆ ವಿಸ್ತೀರ್ಣಕ್ಕೆ ಸಂಬಂಧಿಸಿದಂತೆ ತಾನು ಪಹಣಿ ಪತ್ರಿಕೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿನಲ್ಲಿ ವಾದಿಯೇ 15 ಗುಂಟೆ ವಿಸ್ತೀರ್ಣದಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂಬುದನ್ನು ಅಲ್ಲಗಳೆದಿರುತ್ತಾರೆ, ಹಾಗೂ ವಾದಿಯರು ತಮ್ಮ ವಿರುದ್ದ ಯಾವುದೇ ದೂರನ್ನು ಪೋಲೀಸ್ ಠಾಣೆಯಲ್ಲಿ ನೀಡಿಲ್ಲ ಎಂದು ನುಡಿದಿರುತ್ತಾರೆ.

**27.** ಪ್ರತಿವಾದಿಯರು ತಮ್ಮ ಪ್ರತಿವಾದಪತ್ರದ ಅಂಶಗಳನ್ನು ರುಜುವಾತುಪಡಿಸಲು, ಒಬ್ಬ ಸಾಕ್ಷಿದಾರರನ್ನು ಡಿ.ಬ್ಲ್ಯೂ.2 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪಾಟೀಸವಾಲಿನಲ್ಲಿ ವಾದಿಯ ಪರ ವಕೀಲರ ಸೂಚನೆಗಳನ್ನು ಅಲ್ಲಗಳೆಯುತ್ತಾ ತಾನು ದಿಃ 14.03.2000 ರ ಕ್ರಯ ಪತ್ರವನ್ನು ನೋಡಿರುವುದಾಗಿ ನುಡಿದಿದ್ದು, ವಾದಿಯ ಗಂಡ ನಿಂಗೇಗೌಡರವರಿಗೆ ಮಂಜೂರಾದ ಸ್ವತ್ತಿನ ಬಗ್ಗೆ ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ, ಅಲ್ಲದೇ ಕ್ರಯಪತ್ರದಲ್ಲಿರುವ ಸ್ವತ್ತನ್ನು ಹೊರತು ಪಡಿಸಿ ಬೇರೆ ಯಾವುದೇ ಸ್ವತ್ತು ಇಲ್ಲ ಎಂದು ನುಡಿದಿರುತ್ತಾರೆ. ಅಲ್ಲದೇ ದಾವಾ ಸ್ವತ್ತಿನ ಅಕ್ಕಪಕ್ಕ ತನ್ನ ಯಾವುದೇ ಸ್ವತ್ತು ಇಲ್ಲ ಎಂದು ನುಡಿದಿರುತ್ತಾರೆ, ಮುಖ್ಯವಾಗಿ ಸದರೀ ಸಾಕ್ಷಿಯ ಹೇಳಿಕೆ ಏನೆಂದರೆ ದಾವಾ ಸ್ವತ್ತಿನಲ್ಲಿ ವಾದಿಯು ಸ್ವಾಧೀನಾನುಭವದಲ್ಲಿ ಇಲ್ಲ ಎಂಬುದಾಗಿದೆ.

**28.** ವಾದಿಯು ತನ್ನ ಪರವಾಗಿ ಹಾಜರುಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ ನಿಪಿ.1 ರ ದಾಖಲೆಯು ವಾದಿಯು ತನ್ನ ಮಗನಿಗೆ ಮುಕ್ತ್ಯಾರು ನಾಮೆ ಅಡಿಯಲ್ಲಿ ಈ ದಾವೆಯನ್ನು ಮುಂದುವರೆಸಲು ಹಾಗೂ ತನ್ನ ಪರವಾಗಿ ಸಾಕ್ಷ್ಯ ನೀಡಲು ನೀಡಿದ ಅಧಿಕಾರ ಪತ್ರವಾಗಿದೆ. ನಿಪಿ.2 ರ ದಾಖಲೆಯು ಮಂಜೂರಾತಿ ಪತ್ರದ ದೃಢೀಕೃತ ನಕಲಾಗಿದ್ದು, ಸದರಿ ದಾಖಲೆಯಂತೆ ಸ.ನಂ.50/1 ರಲ್ಲಿ 00.25

ಗುಂಟೆ ವಿಸ್ತೀರ್ಣದ ಸ್ವತ್ತು ನಿಂಗೇಗೌಡ ಉಃ ಚಂದ್ರೇಗೌಡ ರವರಿಗೆ ಮಂಜೂರಾದ ಬಗ್ಗೆ ಕಂಡು ಬರುತ್ತದೆ. ನಿಪಿ.3 ರ ದಾಖಲೆಯು ಪಹಣಿ ಪತ್ರಿಕೆಯಾಗಿದ್ದು, ಸದರೀ ದಾಖಲೆಯನ್ವಯ ಸ.ನಂ.50/ಪಿ7 ರಲ್ಲಿ 10 ಗುಂಟೆ ವಿಸ್ತೀರ್ಣದ ಸ್ವತ್ತು ನಿಂಗೇಗೌಡ ಉಃ ಚಂದ್ರೇಗೌಡ ರವರ ಹೆಸರಿನಲ್ಲಿ ಇರುವುದು ಕಂಡು ಬರುತ್ತದೆ. ನಿಪಿ.4 ರ ದಾಖಲೆಯು ದಿಃ 29.09.1998 ರ ಕ್ರಯ ಪತ್ರದ ದೃಢೀಕೃತ ನಕಲಾಗಿದ್ದು ಅದರಂತೆ, ವಾದಿಯ ಗಂಡ ನಿಂಗೇಗೌಡ ಉಃ ಚಂದ್ರು ಬಿನ್ ನಂಜುಂಡೇಗೌಡ ರವರು ಪ್ರಕಾಶ್ ಬಿನ್ ಬೋರೇಗೌಡ ರವರಿಂದ ಸ.ನಂ.9/1 ರಲ್ಲಿ 1 ಗುಂಟೆ ವಿಸ್ತೀರ್ಣದ ಸ್ವತ್ತನ್ನು ಅದೇ ರೀತಿ ಸದರೀ ಸ.ನಂಬರ್ ನಲ್ಲಿ 2 ಗುಂಟೆ ವಿಸ್ತೀರ್ಣದ ಸ್ವತ್ತನ್ನು ಕ್ರಯಕ್ಕೆ ಪಡೆದಿರುವುದಾಗಿ ಕಂಡು ಬರುತ್ತದೆ. ಸದರೀ ದಾಖಲೆಯು ಸ.ನಂ.9/1 ಕ್ಕೆ ಸಂಬಂಧಪಟ್ಟಿತ್ತು ಸದರೀ ಸ. ನಂಬರ್ ಗೂ ದಾವಾ ಸ್ವತ್ತಿಗೂ ಯವುದೇ ಸಂಬಂಧ ಇರುವುದಿಲ್ಲ.

**29.** ನಿಪಿ.5 ರ ದಾಖಲೆಯು ದಿಃ 15.03.2000 ದ ಕ್ರಯ ಪತ್ರವಾಗಿದ್ದು, ನಿಂಗೇಗೌಡ ಉಃ ಚಂದ್ರೇಗೌಡ ರವರು ಕೃಷ್ಣೇಗೌಡ ಬಿನ್ ಹೋನ್ನೇಗೌಡ ರವರಿಗೆ ಸ.ನಂ. 50/1 ರಲ್ಲಿ 10 ಗುಂಟೆ ವಿಸ್ತೀರ್ಣದ ಸ್ವತ್ತನ್ನು ಮರಾಟ ಮಾಡಿರುವುದಾಗಿ ಕಂಡು ಬರುತ್ತದೆ. ನಿಪಿ.6 ರ ದಾಖಲೆಯು ಮಂಜೂರಾತಿ ಪತ್ರದ ದೃಢೀಕೃತ ನಕಲಾಗಿದ್ದು, ಸದರಿ ದಾಖಲೆ ಮತ್ತು ನಿಪಿ.2 ರ ದಾಖಲೆ ಒಂದೇ ಆಗಿರುತ್ತದೆ. ನಿಪಿ.7 ರ ದಾಖಲೆಯು ಮಂಜೂರಾತಿ ಪತ್ರದ ದೃಢೀಕೃತ ನಕಲಾಗಿದ್ದು, ಸದರೀ ದಾಖಲೆಯಂತೆ ಸ.ನಂ.10, 50 ಮತ್ತು 48 ರ ಗೋಮಾಳ ಜಮೀನನ್ನು ಹಲವು ಫಲಾನುಭವಿಗಳಿಗೆ ಮಂಜೂರಾದ ಬಗ್ಗೆ ಕಂಡು ಬರುತ್ತದೆ. ಸದರೀ ಫಲಾನುಭವಿಗಳಲ್ಲಿ ವಾದಿಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡ ರವರಿಗೂ ಸ.ನಂ.50 ರಲ್ಲಿ 25 ಗುಂಟೆ ವಿಸ್ತೀರ್ಣದ ಸ್ವತ್ತನ್ನು ಹಾಗೂ ಸ.ನಂ.48 ರಲ್ಲಿ 12 ಗುಂಟೆ ವಿಸ್ತೀರ್ಣದ ಸ್ವತ್ತನ್ನು ಮಂಜೂರು ಮಾಡಿರುವುದಾಗಿ ಕಂಡು ಬರುತ್ತದೆ. ನಿಪಿ.8 ರ ದಾಖಲೆಯು ಹಿರೀಸಾವೆ ಹೋಬಳಿ, ಬ್ಯಾಡರಹಳ್ಳಿ ಗ್ರಾಮದ ನಕ್ಷೆಯಾಗಿದ್ದು ಸದರಿ ದಾಖಲೆಯಲ್ಲಿ ಸ.ನಂ.50/1 ರಲ್ಲಿ 25 ಗುಂಟೆ ವಿಸ್ತೀರ್ಣ, ಸ.ನಂ.50/2 ರಲ್ಲಿ 15 ಗುಂಟೆ ವಿಸ್ತೀರ್ಣ ಹಾಗೂ ಸ.ನಂ.48/3 ರಲ್ಲಿ 12 ಗುಂಟೆ ವಿಸ್ತೀರ್ಣದ ಸ್ವತ್ತನ್ನು ಮಂಜೂರು

ಮಾಡಿರುವುದಾಗಿ ನಮೂದಿಸಿದೆ. ನಿಪಿ.9 ರ ದಾಖಲೆಯು ನಿಂಗೇಗೌಡ ಉಃ ಚಂದ್ರೇಗೌಡ ರವರ ಮರಣ ಪ್ರಮಾಣಪತ್ರವಾಗಿದ್ದ, ಸದರಿಯವರು ದಿಃ 08.04.2017 ರಂದು ಮೃತ ಪಟ್ಟಿರುವುದಾಗಿ ನಮೂದಿಸಲಾಗಿದೆ. ನಿ.ಪಿ.10 ರ ದಾಖಲೆಯು, ಮ್ಯುಟೇಶನ್ ರಿಜಿಸ್ಟರ್ ದಾಖಲೆಯಲ್ಲಿ ಸ.ನಂ.50/ಪಿ9 ರ ಸ್ವತ್ತಿನಲ್ಲಿ 35 ಗುಂಟೆ ವಿಸ್ತೀರ್ಣದ ಸ್ವತ್ತು ವಾದಿಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡ ರವರ ಹೆಸರಿನಿಂದ ವಾದಿಯ ಹೆಸರಿಗೆ ಖಾತೆ ಬದಲಾವಣೆಯಾಗಿರುವುದು ಕಂಡು ಬರುತ್ತದೆ. ನಿ.ಪಿ.12 ಮತ್ತು ನಿ.ಪಿ.13 ರ ದಾಖಲೆಗಳಲ್ಲಿ ನಿಂಗೇಗೌಡ ಉಃ ಚಂದ್ರೇಗೌಡ ರವರ ಹೆಸರಿನಲ್ಲಿಯೇ ಮುಂದುವರೆದಿರುವುದು ಕಂಡು ಬರುತ್ತದೆ. ಅದೇ ರೀತಿ ನಿ.ಪಿ.14 ರ ದಾಖಲೆಯಲ್ಲಿ ಸದರಿ ಸ್ವತ್ತನ್ನು ತನ್ನ ಹೆಸರಿಗೆ ಪೌತಿ ಖಾತೆ ಆಧಾರದ ಮೇಲೆ ವಾದಿಯು ಖಾತಾ ಬದಲಾವಣೆ ಮಾಡಿಸಿಕೊಂಡಿರುವುದದು ಕಂಡು ಬರುತ್ತದೆ. ನಿ.ಪಿ.11 ಮತ್ತು 15 ರಿಂದ 18 ರ ದಾಖಲೆಯು ಮ್ಯುಟೇಶನ್ ರಿಜಿಸ್ಟರ್ ಎಕ್ಸ್ ಟ್ರಾಕ್ಟ್ ಆಗಿದ್ದು ಸದರೀ ದಾಖಲೆಯಲ್ಲಿ ಪೌತಿ ಖಾತೆ ಆಧಾರದ ಮೇಲೆ ನಿಂಗೇಗೌಡ ಉಃ ಚಂದ್ರೇಗೌಡ ರವರ ಹೆಸರಿನಿಂದ ವಾದಿಯ ಹೆಸರಿಗೆ ಸ್ವತ್ತುಗಳು ಖಾತಾ ಬದಲಾವಣೆ ಆಗಿರುವುದು ಕಂಡು ಬರುತ್ತದೆ. ನಿ.ಪಿ.19 ರ ದಾಖಲೆಯು ಪಹಣಿ ಪತ್ರಿಕೆಯಾಗಿದ್ದು, ಸದರೀ ದಾಖಲೆಯಲ್ಲಿಯೂ ಸ.ನಂ.50/ಪಿ9 ರಲ್ಲಿ ದಾವಾ ಸ್ವತ್ತು ವಾದಿಯ ಹೆಸರಿನಲ್ಲಿ ಇರುವುದು ಕಂಡು ಬರುತ್ತದೆ. ಅಲ್ಲದೇ ನಿ.ಪಿ.20 ರ ದಾಖಲೆಯಂತೆ ದಾವಾ ಸ.ನಂ. ಸ್ವತ್ತು ವಾದಿಯ ಹೆಸರಿನಲ್ಲಿ ಖಾತೆ ಬದಲಾವಣೆಯಾಗಿರುವುದು ಕಂಡುಬರುತ್ತದೆ.

**30.** ಪ್ರತಿವಾದಿಯರು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ನಿ.ಡಿ.1 ರ ದಾಖಲೆಯು ದಿಃ 14.03.2000 ರ ನೋಂದಾಯಿತ ಕ್ರಯ ಪತ್ರವಾಗಿದ್ದು, ಸದರಿ ದಾಖಲೆಯಂತೆ ವಾದಿಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡರವರು ಸ.ನಂ.50/1 ರಲ್ಲಿ 10 ಗುಂಟೆ ವಿಸ್ತೀರ್ಣದ ಸ್ವತ್ತನ್ನು ಕೃಷ್ಣೇಗೌಡ ಬಿನ್ ಹೋನ್ನೇಗೌಡರವರಿಗೆ ಮಾರಾಟ ಮಾಡಿರುವುದು ಕಂಡು ಬರುತ್ತದೆ. ಅದರಂತೆ ನಿ.ಡಿ.2 ರಿಂದ ನಿ.ಡಿ.27 ರ ದಾಖಲೆಗಳು ಪಹಣಿ ಪತ್ರಿಕೆಗಳಾಗಿದ್ದು, ನಿ.ಡಿ.2 ಮತ್ತು 3 ದಾವಾ ಸ.ನಂ. ಗೆ ಸಂಬಂಧಿಸಿದ್ದು, ಉಳಿದ ದಾಖಲೆಗಳು ದಾವಾ ಸ್ವತ್ತಿಗೆ ಸಂಬಂಧಿಸಿದ

ದಾಖಲೆಗಳಾಗಿರುವುದಿಲ್ಲ. ನಿ.ಡಿ.28 ರ ದಾಖಲೆಯು ಪಟ್ಟಾ ಪುಸ್ತಕವಾಗಿದ್ದು, ನಿಪಿ.29 ಮತ್ತು 30 ರ ದಾಖಲೆಗಳು ಕಂದಾಯ ರಸೀದಿಗಳಾಗಿದ್ದು, ಕೃಷ್ಣೇಗೌಡ ಬಿನ್ ಹೋನ್ನೇಗೌಡರವರು ಸ.ನಂ.50/ಪಿ11 ರಲ್ಲಿ 27 ಗುಂಟೆ ವಿಸ್ತೀರ್ಣದ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯವನ್ನು ಪಾವತಿ ಮಾಡುತ್ತಾ ಬಂದಿರುತ್ತಾರೆ. ಸದರಿ ದಾಖಲೆಗಳು ಹಾಗೂ ಮೌಖಿಕ ಸಾಕ್ಷ್ಯಗಳಿಂದ ದಾವಾ ಸ್ವತ್ತನ್ನು ಒಳಗೊಂಡಂತೆ ಇತರ ಸ್ವತ್ತುಗಳು ನಿಂಗೇಗೌಡ ಉಃ ಚಂದ್ರೇಗೌಡರವರಿಗೆ ಮಂಜೂರಾಗಿರುವುದು ಕಂಡು ಬರುತ್ತದೆ ಆದರೆ ದಾವಾ ಸ.ನಂ. ನಲ್ಲಿ 10 ಗುಂಟೆ ವಿಸ್ತೀರ್ಣದ ಸ್ವತ್ತನ್ನು ಕೃಷ್ಣೇಗೌಡ ಬಿನ್ ಹೋನ್ನೇಗೌಡರವರಿಗೆ ನಿ.ಡಿ.1 ದಿಃ 14.03.2000 ದ ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿರುವುದು ಕಂಡುಬರುತ್ತದೆ, ಅಲ್ಲದೇ ಸದರಿ ಸ್ವತ್ತಿನಲ್ಲಿ ಪ್ರತಿವಾದಿಯರು ಸ್ವಾಧೀನಾನುಭವದಲ್ಲಿ ಇರುವುದು ಕಂಡುಬರುತ್ತದೆ. ಹೀಗಾಗಿ ಸ್ವತ್ತುಗಳು ನಿಂಗೇಗೌಡ ಉಃ ಚಂದ್ರೇಗೌಡ ರವರಿಗೆ ಮಂಜೂರಾಗಿದ್ದರೂ ಕ್ರಯಪತ್ರದ ಪ್ರಕಾರ ದಾವಾಸ್ವತ್ತನ್ನು ಕೃಷ್ಣೇಗೌಡ ಬಿನ್ ಹೋನ್ನೇಗೌಡರವರಿಗೆ ಮಾರಾಟ ಮಾಡಿರುವುದು ಕಂಡುಬಂದಿದ್ದು, ಅಂದಿನಿಂದ ಪ್ರತಿವಾದಿಯರು ಕಂದಾಯ ವಗ್ಯೆರೆ ಪಾವತಿಸುತ್ತಾ ಸ್ವಾಧೀನಾನುಭವದಲ್ಲಿ ಇರುವುದು ಕಂಡುಬರುತ್ತದೆ ಹೀಗಾಗಿ ವಾದಿಯು ದಾವಾಸ್ವತ್ತು ನಿಂಗೇಗೌಡ ಉಃ ಚಂದ್ರೇಗೌಡರವರಿಗೆ ಮಂಜೂರಾಗಿರುವ ಸ್ವತ್ತಾಗಿದ್ದರೂ ಅದನ್ನು ಸಾಬೀತುಪಡಿಸುವಲ್ಲಿ ವಿಫಲರಾಗಿದ್ದಾರೆ ಎಂದು ಅಭಿಪ್ರಾಯಪಟ್ಟು **ವಿವಾದಾಂಶ 1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**31. ವಿವಾದಾಂಶ 2 ಮತ್ತು 3 :** ವಾದಿಯ ತನ್ನ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯದ ಮೂಲಕ ಪ್ರತಿವಾದಿಯರು ದಾವಾ ಸ್ವತ್ತಿನಲ್ಲಿ ವಾದಿಯ ಸ್ವಾಧೀನಾನುಭವಕ್ಕೆ ಅಡ್ಡಿಪಡಿಸುತ್ತಿದ್ದಾರೆಂದು ರುಜುವಾತುಪಡಿಸುವಲ್ಲಿ ವಾದಿಯು ವಿಫಲರಾಗಿದ್ದು, ವಾದಪತ್ರದಲ್ಲಿ ಹೇಳಿರುವಂತೆ ಅಡ್ಡಿಪಡಿಸುತ್ತಿದ್ದಾರೆ ಎಂಬ ಹೇಳಿಕೆಯಲ್ಲಿ ಯಾವುದೇ ಹುರುಳಿಲ್ಲ ಎಂದು ಅಭಿಪ್ರಾಯಪಟ್ಟು, **ವಿವಾದಾಂಶ 2 ಮತ್ತ 3 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**32. ವಿವಾದಾಂಶ 4:** ಈಗಾಗಲೇ ಈ ನ್ಯಾಯಾಲಯವು 1 ರಿಂದ 3 ನೇ

ವಿವಾದಾಂಶಗಳನ್ನು ವಾದಿಯರ ಪರ ನಕಾರಾತ್ಮಕವಾಗಿ ಉತ್ತರಿಸಿರುವುದರಿಂದ, ವಾದಿಯರು ತಾವು ಕೇಳಿದ ಪರಿಹಾರಗಳನ್ನು ಪಡೆಯಲು ಸಾಧ್ಯವಿಲ್ಲ. ಹಾಗೂ 1 ನೇ ಪ್ರತಿವಾದಿಯು ವಾದಿಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡರವರಿಂದ ದಾವಾ ಸ್ವತ್ತನ್ನು ದಿಃ14.03.2000 ರಂದು ಖರೀದಿ ಮಾಡಿರುತ್ತಾರೆ ಎಂದು ನಿ.ಡಿ.1 ದಾಖಲೆಯನ್ವಯ ಸಾಬೀತುಪಡಿಸಿರುವುದರಿಂದ ಪ್ರತಿವಾದಿಯರು ತಾವು ವಾದಿಯ ಗಂಡ ನಿಂಗೇಗೌಡ ಉಃ ಚಂದ್ರೇಗೌಡರವರಿಂದ ದಾವಾಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದು ರುಜುವಾತುಪಡಿಸುವಲ್ಲಿ ಸಫಲರಾಗಿರುತ್ತಾರೆ ಎಂದು ಅಭಿಪ್ರಾಯಪಡುತ್ತಾ **4 ನೇ ವಿವಾದಾಂಶವನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**33. ವಿವಾದಾಂಶ 5:** ಈಗಾಗಲೇ ವಿವಾದಾಂಶ 1 ರಿಂದ 3 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದು ಅಂಶಗಳನ್ನು ಪುನರ್ ಉಚ್ಚರಿಸುವ ಅಗತ್ಯವಿಲ್ಲ ಎಂದು ಪರಿಗಣಿಸಿ ವಾದಿಯು ದಾವೆಯಲ್ಲಿ ಕೋರಿರುವ ಪರಿಹಾರಗಳನ್ನು ಪಡೆಯಲು ಅನರ್ಹಳೆಂದು ಅಭಿಪ್ರಾಯಪಡುತ್ತಾ **4 ನೇ ವಿವಾದಾಂಶವನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**34. ವಿವಾದಂಶ ಸಂಖ್ಯೆ : 6 :** ಅಂಶ 1 ರಿಂದ 5 ರಲ್ಲಿ ಚರ್ಚಿಸಿರುವ ಕಾರಣಗಳಿಗಾಗಿ, ಈ ಕೆಳಕಂಡಂತೆ ಆದೇಶ ಮಾಡಲಾಗಿರುತ್ತದೆ.

**:: ಆದೇಶ ::**

ವಾದಿ ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಲಾಗಿದೆ.

ತೀರ್ಪಿನಂತೆ ಡಿಕ್ರಿ ಬರೆಯಿರಿ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಹೇಳಿ, ಅವರಿಂದ ಕಂಪ್ಯೂಟರ್ ನಲ್ಲಿ ಟೈಪ್ ಮಾಡಿಸಿ, ನನ್ನಿಂದ ತಿದ್ದುಪಡಿ ಮಾಡಿ ಇಂದು ದಿನಾಂಕಃ **30 ನೇ ಏಪ್ರಿಲ್ 2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(ಶ್ರೀಮತಿ ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.**

**:: ಪರಿಚ್ಛೇದ ::**

**1. ವಾದಿಯ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ .**

ಪಿ.ಡಬ್ಲ್ಯೂ.1 ಃ ಶರತ್
ಪಿ.ಡಬ್ಲ್ಯೂ.2 ಃ ಅಣ್ಣೇಗೌಡ
ಪಿ.ಡಬ್ಲ್ಯೂ.3 ಃ ಶಿವರಾಜು

**2. ವಾದಿಯ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ**

| | | |
|---|---|---|
| ನಿಪಿ.1 | ಃ | ಜಿ.ಪಿ.ಎ |
| ನಿಪಿ.2 | ಃ | ಮಂಜೂರಾತಿ ಪತ್ರದ ದೃಢೀಕೃತ ನಕಲು |
| ನಿಪಿ.3 | ಃ | ಪಹಣಿಯ ದೃಢೀಕೃತ ನಕಲು |
| ನಿಪಿ.4 | ಃ | ದಿಃ 29.09.1998 ರಂದು ಆದ ನೊಂದಾಯಿತ ಕ್ರಯ ಪತ್ರದ ದೃಢೀಕೃತ ನಕಲು |
| ನಿಪಿ.5 | ಃ | ನೊಂದಾಯಿತ ಕ್ರಯ ಪತ್ರದ ದೃಢೀಕೃತ ನಕಲು |
| ನಿಪಿ.6 | ಃ | ಭೂ ಮಂಜೂರಾತಿ ಪತ್ರದ ದೃಢೀಕೃತ ನಕಲು |
| ನಿಪಿ.7 | ಃ | ಅಧೀಕೃತ ಜ್ಞಾಪನ ಪತ್ರ |
| ನಿಪಿ.8 | ಃ | ನಕಾಶೆಯ ದೃಢೀಕೃತ ನಕಲು |
| ನಿಪಿ.9 | ಃ | ತನ್ನ ತಂದೆಯ ಮರಣ ಪ್ರಮಾಣ ಪತ್ರ |
| ನಿಪಿ.10, 11 | ಃ | 2 ಎಂ.ಆರ್ ನ ಪ್ರತಿಗಳು |
| ನಿಪಿ.12 ರಿಂದ 14 | ಃ | 3 ಪಹಣಿ ಪತ್ರಿಕೆಗಳು |
| ನಿಪಿ.15 ರಿಂದ 18 | ಃ | 4 ಎಂ.ಆರ್ ನ ದೃಢೀಕೃತ ನಕಲು ಪ್ರತಿಗಳು |

| | | |
|---|---|---|
| ನಿಪಿ.19 | ಃ | ಪಹಣಿ ಪತ್ರಿಕೆ |
| ನಿಪಿ.20 | ಃ | ಪಹಣಿ ಪತ್ರಿಕೆ |

**3. ಪ್ರತಿವಾದಿಗಳ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿ ಃ**

| | |
|---|---|
| ಡಿ.ಡಬ್ಲ್ಯೂ.1 ಃ | ಬಿ.ಹೆಚ್.ಕೃಷ್ಣೇಗೌಡ |
| ಡಿ.ಡಬ್ಲ್ಯೂ.2 ಃ | ಶಂಕರಲಿಂಗೇಗೌಡ |

**4. ಪ್ರತಿವಾದಿಗಳ ಪರ ಗುರುತಿಸಲಾದ ದಸ್ತಾವೇಜುಗಳ ಪಟ್ಟಿ ಃ**

| | | |
|---|---|---|
| ನಿಡಿ.1 | ಃ | ದಿಃ 14.03.2000 ರಂದು 1 ನೇ ಪ್ರತಿವಾದಿಯ ಹೆಸರಿಗೆ ಆದ ನೊಂದಾಯಿತ ಕ್ರಯಪತ್ರ |
| ನಿಡಿ.2 | ಃ | ಮ್ಯುಟೇಶನ್ ರಿಜಿಸ್ಟರ್ |
| ನಿಡಿ.3 ರಿಂದ 27 | ಃ | ಪಹಣಿ ಪತ್ರಿಕೆಗಳು |
| ನಿಡಿ.28 | ಃ | ಒಂದು ಪಟ್ಟಾ ಮತ್ತು ರಶೀದಿ ಪುಸ್ತಕ |
| ನಿಡಿ.29 ಮತ್ತು 30 | ಃ | ಎರಡು ಕಂದಾಯ ಪಾವತಿ ರಶೀದಿಗಳು |

**(ಶ್ರೀಮತಿ ಕುಸುಮ ವಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.**

**(ಈ ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)**
**(ತೀರ್ಪಿನ ಪ್ರತಿಯನ್ನು ಪ್ರತ್ಯೇಕವಾಗಿ ಲಗತ್ತಿಸಲಾಗಿದೆ.)**

**:: ಆದೇಶ ::**

ವಾದಿ ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ವಜಾಗೊಳಿಸಲಾಗಿದೆ.

ತೀರ್ಪಿನಂತೆ ಡಿಕ್ರಿ ಬರೆಯಿರಿ.

(ಶ್ರೀಮತಿ ಕುಸುಮ ವಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ಚನ್ನರಾಯಪಟ್ಟಣ.